

ಕಾನನ
SEPTEMBER 2011
ನಿಸರ್ಗದೆಡೆಗೆ ಪಯಣ
© WCG
WCG
WILDLIFE
CONSERVATION
GROUP

# ಕಾನನ

ನಿಸರ್ಗದೆಡೆಗೆ ಪಯಣ SEPTEMBER 2011



## ಲೇಖನಗಳು

* ಹಕ್ಕಿಲೋಕ - ನಾಗೇಶ್.ಓ.ಎಸ್
* ಏನ್ಸ್ವಾಮಿ ಅದು? - ಶಂಕರಪ್ಪ.ಕೆ.ಪಿ
* ಮನಸ್ಸು - ಅಶ್ವಥ್.ಕೆ.ಎನ್

ಅನಿಸಿಕೆಗೆ

E-mail: kaanana.mag@gmail.com

ಮುಖಪುಟ: Green Keelback

© WCG

# ಸಂಪಾದಕೀಯ

ನಮ್ಮ ರೂಮಿಗೆ ಹೊಂದಿಕೊಂಡಿರುವಂತೆ ಇರುವ ಹಸಿರು ಕಾಡಿನಲ್ಲಿ ದೊಡ್ಡ ದೊಡ್ಡ ಮರಗಳಿಂದಿಡಿದು ಸಣ್ಣ ಗಿಡಗಳು, ಹುಲ್ಲು ಬಯಲುಗಳು ಇರುವುದರಿಂದ ಹಲವಾರು ಬಗೆಯ ಕೀಟ, ಹಾವು, ಹಂದಿ, ಹಕ್ಕಿಗಳು ಇವೆ ಮೊದಲಾದ ಸಾವಿರಾರು ಜೀವಸಂಕುಲಗಳಿರುವ ಜಾಗ. ಎಷ್ಟೋ ಸಾರಿ ನಮ್ಮ ರೂಮಿಗೆ ದುಂಬಿ, ಕಡಜ, ಮತ್ತಿತರ ವಿಚಿತ್ರ ಕೀಟಗಳು, ಹಾವುಗಳು, ಅಥಿತಿಗಳಾಗಿ ಬರುತ್ತಿರುತ್ತವೆ. ಕಾಡು ಪೂಜಾರರ ಪೈಕಿಯ ಸಿದ್ದಣ್ಣ ಈ ಕಾಡಿನಲ್ಲಿರುವ ಜೀವಿಗಳ ಮಧ್ಯೆ ಒಂದು ಕಾಡುಜೀವಿಯಾಗಿ ಅಲೆಯುತ್ತಿದ್ದು. ನಮಗೂ–ಅವನಿಗೂ, ಪ್ರಾಣಿ–ಪಕ್ಷಿ ಕೀಟಗಳಿಗೂ, ಅವಿನಾಭಾವ ಸಂಬಂಧವಿದ್ದು, ಹಾಗೆ ರೂಮಿನ ಮುಂದೆ ಹಾದು ಹೋಗಬೇಕಾದರೆ, ನಾವು ಕೀಟವನ್ನು ನೋಡುತ್ತಿರಬೇಕಾದರೆ 'ಏನ್ಸ್ವಾಮಿ ಅದು?, ಎಂದು ಶಂಕರಪ್ಪನವರನ್ನು ಮಾತ್ತನಾಡುತ್ತಾ ಹೋಗುತ್ತಿದ್ದ. . .ಈ ಅನುಭವಗಳನ್ನು ಶಂಕರಪ್ಪ ಕೆ.ಪಿ. ರವರ 'ಏನ್ಸ್ವಾಮಿ ಅದು?' ಎಂಬ ಲೇಖನದಲ್ಲಿ ಕಾಡಿನ ಹಸಿರನ್ನು ಲೇಪಿಸಿದ್ದಾರೆ.

ಈ ಬಾರಿಯು ಹಕ್ಕಿಲೋಕದಲ್ಲಿ ರಾಜಹಕ್ಕಿಯ ಬಗ್ಗೆ ಸಣ್ಣ ಮಾಹಿತಿಯನ್ನು ನಾಗೇಶ್ ರವರು ವಿಸ್ತಾರವಾಗಿ ವಿವರಣೆ ಕೊಡಲಾಗಿದೆ.

ಪ್ರಕೃತಿಗೆ ಮಾನವನ ಚಂಚಲ ಮನಸ್ಸನ್ನು ಮೃದಗೊಳಿಸುವ ಶಕ್ತಿಯಿದೆ. ಹಕ್ಕಿ, ಗಿಡ, ಹೂವು,ಹಣ್ಣು, ಬಳ್ಳಿ ಎಲ್ಲವನ್ನೂ ಶಾಂತರೀತಿಯಲ್ಲಿ ಅನುಭವಿಸಿ, ಮನುಕುಲದೊಳಗೆ ಮುಗ್ಧರಾಗಿ ಯಾವಾಗಲು ಎಲ್ಲಾವರಾಗಿ, ನಿಸರ್ಗದೊಳಗೆ ಒಂದಾಗಿ ಬಾಳಿ ಎಂಬುವ ಐಕ್ಯಭಾವವನ್ನು ಅಶ್ವಥ್.ಕೆ.ಎನ್ ರವರ ಸಾಲುಗಳಲ್ಲಿ ಕಾಣಬಹುದು.

ಮತ್ತೆ ಎಲ್ಲಾ ಓದುಗರಿಗೆ ದಸರ ಹಬ್ಬದ ಶುಭಾಶಯಗಳು.




ಅಂತ್ಯದಲ್ಲಿ

**ಕಾನನಕ್ಕೆ** ನೀವು ಬರೆಯಿರಿ ವನ್ಯಜೀವಿ ಹಾಗು ಪರಿಸರ ಸಂರಕ್ಷಣೆ, ವಿಜ್ಞಾನದ ಬಗ್ಗೆ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯುಬಹುದು.

ಇ–ಮೇಲ್ ವಿಳಾಸ: kaanana.mag@gmail.com

**Wildlife Conservation Group**

© WCG



# ಹಕ್ಕಿಲೋಕ

## * ರಾಜಹಕ್ಕಿ

**ವೈಜ್ಞಾನಿಕ ಹೆಸರು:** ***Rhipidura aureola***

**ಇಂಗ್ಲೀಷ್ ಹೆಸರು: White-browed-Fantail-Flycatcher**

ಕಳೆದ ವಾರ ಕೆಲವು ನಗರದ ಪಕ್ಷಿಪ್ರೇಮಿಗಳ ಗುಂಪು ನಮ್ಮ ಹಳ್ಳಿಗೆ ಪಕ್ಷಿ ವೀಕ್ಷಣೆ ಹಾಗು ಫೋಟೋ ತೆಗೆಯಲೆಂದು ಬರುವುದಾಗಿ ಸ್ವಾಮಿಗಳಿಂದ ಒಂದು ವಾರದ ಮುಂಚೆಯೇ ನಮಗೆ ಬುಲಾವು ಬಂತು. ಕಾಡಿನ ಕಡೆಗೆ ಕರೆದುಕೊಂಡು ಹೋಗಿ ತೋರಿಸಿದರಾಯಿತು ಎಂದು ಕೊಂಡು ಗೆಳೆಯ ಶಂಕರನಿಗೆ ಹೇಳಿದೆ. ಅವನು 'ನನಗೆ ಯಾವುದೋ ಇಂಪರ್ಟೆಂಟ್ ಕೆಲಸವಿದೆ, ನೀನು ಕರ್ಕೊಂಡೊಗು' ಎಂದು ಹೇಳಿದ.

ಅಂದು ಭಾನುವಾರ ಬೆಳಿಗ್ಗೆ ಆರು ಗಂಟೆಗೆ ಆಶ್ರಮದ ಬಳಿ ಇರಬೇಕು ಎಂಬ ಸ್ವಾಮಿಗಳ ಕರೆಯಿಂದ ಬೆಳಿಗ್ಗೆ ಆರುಗಂಟೆಗೆ ಆಶ್ರಮದ ಬಳಿ ಕಾಯುತ್ತಾ ಕುಳಿತೆ.
ನನ್ನ ಪ್ರಕಾರ, ಏನೋ ಐದಾರು ಜನ ಬರಬಹುದು. ಎಂಬ ಊಹೆಗೆ ಮೀರಿ ಆರವತ್ತು-ಎಪ್ಪತ್ತು ಜನಗಳು ಬಂದರು. ಒಬ್ಬಬ್ಬರ ಬಳಿಯೂ ಒಂದೊಂದು ಬಾರುದ್ದ ಇರುವ ಡಿಎಸ್ಸೆಲಾರ್ ಕ್ಯಾಮರಗಳು ಎಲ್ಲಾವು ಬಂದವು, ನನಗೆ ಆಶ್ಚರ್ಯವಾಯಿತು, ಇವರಿಗೆ ಪಕ್ಷಿಗಳು ಸಿಗುತ್ತಾವಾ? ಇಷ್ಟು ಜನರ ಜೊಂಬೆಗೆ ಹಾರಿ ಹೋಗುತ್ತವೆ ಎಂಬ ಊಹೆ ನಿಜಯಿತು.

ನಾವು ಸುಮಾರು ಒಂದು ಫಾರ್ಲಂಗ್ ದೂರ ಇರಬೇಕಾದರೆಯೇ  ಪಕ್ಷಿಗಳು ಮಾಯಾವಾಗುತ್ತಿದ್ದವು. ನೀವೇ ಯೋಚನೆ ಮಾಡಿ ಆರವತ್ತು-ಎಪ್ಪತ್ತು ಜನಗಳ ಗುಂಪ್ಪು, ಪಕ್ಷಿವೀಕ್ಷಣೆ ಮಾಡಲು ಬಂದಿದ್ದಾರೆ ಎಂದರೆ ಪಕ್ಷಿಗಳ ಗತ್ತಿ ಏನು!. ಪಕ್ಷಿಗಳು ಸಿಗುತ್ತವೆಯೇ? ಹಾರಿ ದೂರ ಹೋದವು.




ಹೀಗೆ ಕಾಡಿನ ಕಡೆಗೆ ಕರೆದುಕೊಂಡು ಹೋದೆ, ಒಂದೇ ಒಂದು ಪಕ್ಷಿಯೂ ಕಣಲೇ ಇಲ್ಲ, ನಮ್ಮನ್ನು ನೋಡಿದರೆ ಸಾಕು. . ! ದೂರದಲ್ಲಿಯೇ ಪಾಲಾಯನಗೊಳ್ಳುತ್ತವೆ, ಸತ್ತೆನೋ ಬದುಕಿದೆನೋ ಎಂದು. ಇನ್ನೂ ಪಕ್ಷಿಗಳು ಪಕ್ಷಿಗಳು ಫೋಟೋಗೆ ಪೋಜು ಕೊಡುವುದದಾರು ಎಲ್ಲಿ?

ಇನ್ನೂ ಅವರ ಬಳಿ ಇದ ಬಾರುದ್ದ ಲೆನ್ಸ್‌ಗಳನ್ನು ಕಂಡರೇ, ಅಷ್ಟೇ ಕತೆ ಮುಗಿಯಿತು. 'ಯಾರೋ ನಮ್ಮನ್ನು ಬೇಟೆಯಾಡಲು ಬಂದೂಕಗಳನ್ನು ತಂದಿದಾರೆ' ಎಂದು ತಿಳಿದು ದೂರ ದೂರ ಹಾರಿಹೋಗುತ್ತಿದ್ದವು.
ಆ ವಿಚಾರ ಹಾಗಿರಲಿ ಯಾವುದೋ ಕೊಂಬೆಯ ಮೇಲೋ ಅಥವಾ ಪೋದೆಗಳಲ್ಲೋ. . .ಒಂದು ಸಣ್ಣ ಪಕ್ಷಿ ಇದೆ ನೋಡಿ ಎಂದು ಯಾರಾದರು ಹೇಳಿದರೆ ಸಾಕು ಕತೆ ಮುಗಿಯಿತು. . ! ಆರವತ್ತು-ಎಪ್ಪತ್ತು ಕ್ಯಾಮರಗಳು ಒಟ್ಟೊಟ್ಟಿಗೆ ಕ್ಲಿಕಿಸುತ್ತಿದವು.

ಕ್ಲಿಕ್. . . . ಕ್ಲಿಕ್. . . . ಕ್ಲಿಕ್. . . . ಕ್ಲಿಕ್. . . . ಕ್ಲಿಕ್. . . . ಕ್ಲಿಕ್
ಟಪ್. . . . ಟಪ್. . . . ಟಪ್. . . . ಟಪ್. . . . ಟಪ್. . . . ಟ ಟ ಟಟಟ ಟಪ್. . . .ಎಂದು ಒಂದೇ ಸಮನೆ ಕ್ಯಾಮರಗಳನ್ನು ಕ್ಲಿಕಿಸಿತ್ತಿದ್ದರು. ನನಗೆ ನಗು ಬರುತ್ತಿತ್ತು. ಇವರ ಪೋಟೋಗ್ರಫಿ, ಪಕ್ಷಿವೀಕ್ಷಣೆಯ ವೈಕರಿ ಕಂಡು.

ಅಂತೂಇಂತೂ ಇವರ ಕ್ಯಾಮರಗಳ ಬಲೆಗೆ ಸಿಕ್ಕಿದ್ದು ಯಾವ ಪಕ್ಷಿ ಗೋತ್ತೆ? "ರಾಜಹಕ್ಕಿ!"

ಇದನ್ನು ಇಂಗ್ಲೀಷ್‌ನಲ್ಲಿ "ವೈಟ್ ಬ್ರೋಡ್ ಫ್ಯಾನ್ಟೇಲ್ ಫ್ಲೈಕ್ಯಾಚರ್" ಎಂದು ಕರೆಯುತಾರೆ, ನಾವೆಲ್ಲ ಫ್ಯಾನ್ಟೈಲ್ ಎಂದು ಕರೆಯುತ್ತೇವೆ. ಇದರ ಬಾಲ ಗಾಳಿ ಬೀಸುವ ಬೀಸಣಿಗೆಯ ರೀತಿಯಲ್ಲಿ ಅಗಲವಾಗಿ ಇರುವುದರಿಂದ ಇದನ್ನು ಫ್ಯಾನ್ಟೈಲ್ ಎಂದೇ ಕರೆಯುವರು.

ಇದು ಗುಬ್ಬಚ್ಚಿ ಗಾತ್ರದ ಕಡು ಕಂದು ಬಣ್ಣವಿರುವ ಹಕ್ಕಿ, ಕಣ್ಣಿನ ಮೇಲೆ ಎದ್ದು ಕಾಣುವ ಬಿಳಿಹುಬ್ಬು ಇದೆ. ಎದೆಯ ಮೇಲೆ ಕಪ್ಪು ಮತ್ತು ಬಿಳಿಯ ಚುಕ್ಕೆಗಳಿವೆ. ಎಲ್ಲಕ್ಕಿಂತ ಈ ಹಕ್ಕಿಯ ಪ್ರಧಾನ ಲಕ್ಷಣವೆಂದರೆ ತನ್ನ ಪುಟ್ಟಬಾಲದ ಪುಕ್ಕಗಳನ್ನು ಬೀಸಣಿಗೆಯಂತೆ ಬಿಚ್ಚಿ ರೆಕ್ಕೆ ಜೋಲುಬಿಟ್ಟು ಕುಣಿಯುತ್ತದೆ. ಕುಳಿತಲ್ಲಿ ಕೂರದೆ ಅಲ್ಲಿಂದಿಲ್ಲಿಗೆ, ಪೊದೆಯಿಂದ ಪೊದೆಗೆ ಹಾರುತ್ತಿರುತ್ತವೆ. ಹಾರಿ ಕುಳಿತಾಗ ತನ್ನ ಬಾಲದ ಬೀಸಣಿಗೆ ಬಿಚ್ಚಿ, ಎಡಕ್ಕೂ ಬಲಕ್ಕೂ ತಿರುಗಿ ಮತ್ತೆ ಬಾಲ ಮಡಚಿ ಹಾರುತ್ತದೆ. ಇವು ಸಾಮಾನ್ಯವಾಗಿ ಕುರುಚಲು ಕಾಡು, ಪೊದೆಗಳು ಇವುಗಳ ಆವಾಸವಾಗಿದ್ದು, ಹುಲ್ಲು, ಜೇಡರ ಬಲೆಗಳಿಂದ ಕೂಡಿದ ಚಿಕ್ಕ ಬಟ್ಟಲಿನಾಕಾರದ ಗೂಡುನ್ನು ಕಟ್ಟಿ ಮೂರು ಅಥವಾ ನಾಲ್ಕು ಮೊಟ್ಟೆಗಳು ಇಟ್ಟು ಮರಿ ಮಾಡುತ್ತವೆ.











– **ನಾಗೇಶ್ ಓ.ಎಸ್.**





# ಏನ್ಸ್ವಾಮಿ ಅದು?

ನಮ್ಮ ತೋಟ ಕಾಯೋ ಸಿದ್ದಣ್ಣ ಕಾಡು ಪೂಜಾರರ ಪೈಕಿಯೋನು. ಅಂದು ನಾನು ನನ್ನ ಪದವಿಯ ಗಣಿತದ ಒಂದು ಕ್ಲಿಷ್ಟವಾದ ತೀರಂನ ಬಿಡಿಸತಾ ಇರಬೇಕಾದರೆ, ಅದ್ಯಾವುದೂ ತಲೆಬುಡ ತಿಳಿದೆ, ತಲೆ ಕೆರಕೊಂಡು 'ಯಾನನ್ಮಗ ಕಂಡಿಡಿದನೋ ಇದನೆಲ್ಲಾ, ನಮ್ಮ ತಲೆ ತಿನ್ನಕೆ' ಎಂದು ಬೇಜಾರಗಿ ಕಿಟಕಿ ಕಡೆ ನೊಡ್ದೆ.

ಹೆಚ್ಚುಕಮ್ಮೀ ಕಾಡಿನ ಮಧ್ಯದಲ್ಲೇ ಇರುವ ನಮ್ಮ ರೂಮಿಗೆ, ವಿವಿಧ ತರಹದ ದುಂಬಿ, ಕಡಜ ಮತ್ತಿತರ ವಿಚಿತ್ರ ಕೀಟಗಳು ಬಂದು ನಮ್ಮ ರೂಮನ್ನೆಲ್ಲಾ ಒಮ್ಮೆ ಪ್ರದಕ್ಷಣೆ ಹಾಕಿ, ಕಂಪೂಟ್ರೂ, ಮೋಬೈಲು, ಎಂಪಿತ್ರೀ ಪ್ಲೇಯರ್ ಮುಂತಾದ ವಸ್ತುಗಳ ಮೇಲೆ ಕುಳಿತು ವಿಶ್ರಮಿಸಿಕೊಂಡು ಹೋಗುತ್ತವೆ.

ಹೀಗೆ ಕೆಲವೊಮ್ಮೆ ಹಾವುಗಳೂ ನಮ್ಮ ರೂಮಿಗೆ ಅತಿಥಿಗಳಾಗಿ ಆಗಮಿಸುವುದೂ ಉಂಟು. ಅದರಲ್ಲೂ ಮಳೆಗಾಲದಲ್ಲಿ ಇವುಗಳ ಆಗಮನ ಹೆಚ್ಚು. ಹೀಗೆ ಮನೆಗೆ ಬಂದ ಉರಗ ಅತಿಥಿಗಳನ್ನು ನಾವು ಸುಮ್ಮನೆ ಕಳಿಸುವುದಾದರೂ ಹೇಗೆ?!

ರಾತ್ರಿವೇಳೆ ಅವು ದಯಪಾಲಿಸಿದರೆ!, ಪಕ್ಕದ ರೂಮಿನವರನ್ನೂ ಎಬ್ಬರಿಸಿ, ಟಾರ್ಚ್ ಹುಡುಕಿ, ಡಿಜಿಟಲ್ ಕ್ಯಾಮರನಾ ಹುಡುಕಿಕೊಂಡೇ ಬೈತಾರೆ.

'ನಾನೇಳಿದ್ರೆ ಕೇಳೋದೇ ಇಲ್ಲಾ! ಆ ಬಾಗಿಲು ಸಂದಿಗೆ ಬಟ್ಟೆಗಿಟ್ಟೆ ಏನಾರ ತುರ್ಕ್ರೋ, ಹಾವುಪಾವು ಬರಲ್ಲಾ ಅಂದ್ರೇ ಏಲ್ಲಿ ಕೇಳ್ತೀರ ನೀವು' ಅಂತ.

ತಡಿತಡಿ ಒಂದು ಪೋಟೋ ಹಿಡಿಯಾನ ಎಂದು ಹೇಳ್ತಾ. 'ಬೆಳಕು ಸಾಲಕಿಲ್ಲಾ, ಸರಿಯಾಗಿ ಟಾರ್ಚು ಬಿಡೊ ಮಾರಾಯಾ!' ಎಂದು ಇನ್ನೇನ್ನು ಕ್ಲಿಕ್ಕಿಸುವಷ್ಟರಲ್ಲಿ; ಹಿಂದೆ ಇದ್ದ ನಾನು 'ಸರಿಯಾಗಿ ಫೋಕಸ್ ಮಾಡೋ ಮೊದ್ಲೇ ಕತ್ಲೇ!' ಪೋಟೊದಲ್ಲಿ ಹಾವು ಅಂಗೇ ಎದ್ದಿ ಬಂದಂಗಿರಬೇಕು ಕಣ್ಣುಗಿಣ್ಣು ಎಲ್ಲಾ,

ಅಗೋ ಅಗೋ ನಾಲಿಗೆ ತಗೀತಾ ಇದೆ

ತಗೊ! ತಗೋ!

ಕ್ಲಿಕ್!



ಅಷ್ಟರಲ್ಲಿ ನಮ್ಮ ಸ್ನೇಕ್ ಎಕ್ಸ್‌ಪರ್ಟ್ ಒಂದು ಕೈಯಲ್ಲಿ ದೊಣ್ಣೆ, ಮತ್ತೊಂದು ಕೈಯಲ್ಲಿ ಡೇನಿಯಲ್ಲರ ಸ್ನೇಕ್ಸ್ ಅಂಡ್ ರೆಪ್ಟೈಲ್ಸ್ ಬುಕ್ಕು ಹಿಡ್ಕೊಂಡ್ ಬಂದು, ಇದು ಯಾವ ಜಾತಿ ಹಾವು ಅಂತ ಆ ಬುಕ್ಕಿನ ಹಾಳೆಗಳನ್ನೆಲ್ಲಾ ತಿರವಾಕಿ ಕಂಡಿಡ್ದು, ಇದು ನಮ್ಮ ಲ್ಯಾಬ್‌ನಲ್ಲಿ ಇದ್ಯಾ ಅಂತ ಕನ್ಫರ್ಮ್ ಮಾಡಿಕೊಂಡು, ತುಂಬಾ ಮುಂಜಾಗ್ರತೆ ವಹಿಸುವರು. ಬಂದಿರುವ ಅತಿಥಿ ಹಾವಿನ ಸಂಬಂದಿಕ್ರು ಯಾರಾದ್ರು ಲ್ಯಾಬಿನಲ್ಲಿ ಇದ್ರೆ, ಇದು ಬಚಾವ್! ಇಲ್ಲಾ ಅಂದ್ರೇ

'ತಲೆಗೆ ಒಂದು ಪೆಟ್ಟು! ತಿಥಿ !

ಮಾರನೇ ದಿನ ಪಾರ್ಮಾಲೀನ್ ಡಬ್ಬದಲ್ಲಿ ಹಾಕಿ, ಶಾಶ್ವತವಾಗಿ ವಿಶ್ರಾಂತ ಸ್ಥಿತಿಯಲ್ಲಿ ಇರುವಂತೆ ಮಾಡಿ, ನಮ್ಮ ಲ್ಯಾಬಿನ ಸ್ಪೆಸಿಮನ್ ಕಲೆಕ್ಷನ್ ಸೇರುತ್ತೆ.

"ಸಣ್ಣ ಮಕ್ಕಳು ಬಾಯಿ ಬಿಟ್ಕೊಂಡು  ಹಾವುಗಳನ್ನ ನೋಡಿದರೆ; ಹೆಣ್ಮಕ್ಕಳು ಕಿವಿ ಮುಚ್ಕೊತಾರೆ" ಆ ಹಾವುಗಳನ್ನ ನೋಡಿ.

ಹೀಗೆ ಈ ನನ್ನ ಕೀಟಬೇಟೆಯ ಕೀರ್ತಿ ಎಲ್ಲಿಯವರಿಗೂ ಹಬ್ಬಿತ್ತೆಂದರೆ,
ಒಮ್ಮೆ ನರ್ಸರಿ ಓದುತ್ತಿರುವ ಪುಟಾಣಿ ಪುಟ್ಟಿ ಬಂದು ನನ್ನ ಕೇಳಿದಳು.

'ಅಣಾ ನೀನ್ ಉಳಾ ಹಿಡಿತೀಯಾ?'

ನಾನು 'ಹೂಃ' ಎಂದೆ.

'ಅಂಗಾದ್ರೆ ಬಾ ಅಲ್ಲದೆ ತೋರಸ್ತೀನಿ' ಎಂದು ನನ್ನನ್ನು ಕರಕೊಂಡೋಗಿ ಜಾರುಬಂಡಿ ಹತ್ತಿರ ಇರುವ ಅಮಟೆಮರದ ಮೇಲೆ ಕುಳಿತಿದ್ದ. ತನ್ನ ರೆಕ್ಕೆಯ ಮೇಲೆ ಮನುಷ್ಯನ ಮುಂಡದ ರೀತಿ ಕಣ್ಣು ಮೂಗು ಮೀಸೆಯ ಚಿತ್ರವಿರುವ, ಒಂದು ಕೆಂಪು ದುಂಬಿಯನ್ನು ತೋರಿಸಿ. ಹಿಡ್ಕೋ ಅಂದ್ಲು. ನಾನು ಅದನ್ನು ಹಿಡಿದು ಜೋಬಿನಲ್ಲಿ ಬಿಟ್ಟಿಕೊಂಡೆ! ಅವಳಿಗೆ ಖುಷಿಯಾಗಿ ನಕ್ಕೊಂಡು ಕುಣ್ಕೊಂಡು ಹೋದ್ಲು.

ಮತ್ತೊಮ್ಮೆ ಮೂರನೇ ತರಗತಿಯ ಮೈಲಾರಿ ಬಂದು ನನ್ನನ್ನು ಕೇಳಿತು. 'ಅಣ ಒಂದು ಹುಳ ನೋಡ್ದೇ!, ಅದಕ್ಕಾ ಆರು ಕಾಲು, ಉದ್ದ ಮೂತಿ, ಗುಂಡಗಿತ್ತು. ಮುಟ್ಟಿದರೆ ಗುಯ್! ಗುಯ್! ಅಂತದೆ ಎಂದು. ತನ್ನ ಕೈ ಬೆರಳುಗಳನ್ನು ಅಂಗೇ ಇಂಗೇ ತಿರುಗಿಸಿ, ಹಿಂಗಿತ್ತು!
ಅದ್ಯಾವುದಣಾ ಹುಳ? ಎಂದ!

ಏನೇಳನಾ ಇವನಿಗೆ!
ಪ್ರಪಂಚದಲ್ಲಿರೋ ಜೀವಿಗಳಲ್ಲಿ ಅರ್ಧದಷ್ಟು ಬರೀ ಕೀಟಸಂಕುಲನೇ ಇದೆ. ಅದರಾಗ ನಿಜವಾಗಿರೋ ಕೀಟಾನ ತಂದು, ಮುಂದೆ ಮಡಕ್ಕೊಂಡು ಪರೀಕ್ಷಿಸಿದರೂ! ಅದು ಯಾವುದು ಅಂತ ಹೇಳೊದು ಕಷ್ಟದ ಕೆಲಸ! ನಾನಂತೂ ಇನ್ನೂ ಹೊಸಬ, ಅಮ್ಮೇಚೂರ್!.

'ನಂಗೊತ್ತಿಲ್ಲಾ ಕಣೋ, ಹಿಡ್ಕೋಂಡ್ ಬಾ ನೋಡನ' ಎಂದೆ. ಅವನು 'ಹೋಗಣೋ! ಈವಣ್ಣನಿಗೇ ಏನು ಗೊತ್ತಿಲ್ಲಾ ಕಣ್ರೋ!' ಎಂದು ನನ್ನನು ಹಾಡಿ, ಪೊಗಳಿ ನನ್ನ ಕಡೆ ಕೈ ತೋರಿಸಿಕೊಂಡು ತನ್ನ ಗೆಳೆಯರಿಗೆಲ್ಲಾ ಸಾರಿಕೊಂಡು ಹೋದ!

ನಮ್ಮ ರೂಮಿನ ಕಿಟಕಿಯ ಪಕ್ಕದಲ್ಲೇ ಇರುವ ಸೀಬೆಯ ಮರ, ನಮಗೆ ಹಲವು ಸಂತೋಷದಾಯಕ ಹವ್ಯಾಸಗಳನ್ನು ಅಂಟುರೋಗದಂತೆ ಅಂಟಿಸುವಲ್ಲಿ ಸಫಲವಾಗಿದೆ. ಈ ಮರದ ಮೇಲೆ ದಿನಾ ಸಂಜೆ ಬಂದು ಕೂರುತ್ತಿದ್ದಾ ಬಾಲದಂಡೆ ಹಕ್ಕಿ ನಮಗೆ ಪೋಟೊಗ್ರಫಿ ಹುಚ್ಚು ಶುರು ಮಾಡ್ಸಿ ಮಂಗಮಾಯಾ ಆಗೋಯ್ತು! ಹಾಗೆಯೇ ಈ ಬಾರಿ ಎಂದೂ ಬಿಡದ ಹಣ್ಣುಗಳನ್ನು ಬಿಟ್ಟು, ನಮ್ಮ ಜೀವನದಲ್ಲಿ ಇದ್ದ ಅಪಾರ ನೆಮ್ಮದಿಗೆ ತನ್ನ ಅನಂತ ಕೊಡುಗೆಯನ್ನು ಕೊಟ್ಟಿದೇ ಈ ವೃಕ್ಷ!.

ರೊಂಬೆ ರೊಂಬೆಗೂ ಜೋತಿರುವ ಹಣ್ಣುಗಳನ್ನು ನೋಡಿಯೇ ಸುಖಿಸಬೇಕು, ತಿನ್ನುವಾಗಿಲ್ಲಾ!. ಒಮ್ಮೆ ನಾನು ಕೆಲ ಹಣ್ಣುಗಳನ್ನು ಕಿತ್ತು ಕಚ್ಚಿದೆ. ಒಳಗೆ ಬರೀ ಬಿಳಿ ಹುಳಾ ಲಾರ್ವೆಗಳು ಪಿಲಪಿಲ ಅಂತಾವೆ! ಥೂ ಅಂಥಾ ಉಗಿದು ಅತ್ತ ಬಿಸಾಕಿ, 'ಅಲ್ಲಾ!, ಈ ಸೀಬೆಕಾಯಿಯ ಸಿಪ್ಪೆ ಮರದಷ್ಟು ಗಟ್ಟಿಯುಗಿದೆ. ಇದರ ಒಳಗೆ ಈ ಹುಳಗಳು ಎಂಗೋದ್ವು!? ಅನ್ಕೋಂಡು ಯೋಚಿಸುತ್ತಿರಬೇಕಾದರೆ ಉದ್ದ ಬಾಲ ಇರೋ ಕಡಜ ಜಾತಿ ಹುಳ ಕಿಟಕಿ ಗಾಜಿನ ಮೇಲೆ ಕುಳಿತುಕೊಂಡು ಆಕಡೆ ಈಕಡೆ ಓಡಾಡ್ತಾ ಇತ್ತು.

'ಸೂಪರಗೈತೆ **Insect specimen!**' ಎಂದು ಹೇಳಿ, ದಡಬಡ ಅಂತ ಜಿರಲೆ ಸಾಯಿಸಲಿಕ್ಕೆ ತಂದಿಟ್ಟಿದ್ದ **Hit** ಹುಡುಕಿ ಎತ್ತಿಕೊಂಡು ಹೋಗಿ ಕಿಟಕಿ ಹತ್ತಿರ ನೋಡ್ತಿನೀ! ಕೀಟ ಮಾಯ! ಅಲ್ಲೆಲ್ಲಾ ಹುಡುಕಿದರೆ ಗೋಡೆ ಮೇಲಿದ್ದ ಹಲ್ಲಿ ಪುಡುಕ್ ಎಂದು ಓಡೋಯ್ತು.



ಎಲ್ಲಾದ್ರೂ ಹಾಳಾಗಿ ಹೋಗ್ಲಿ ಎಂದು ಮತ್ತೆ ಗಣಿತ ಪುಸ್ತಕ ಬಿಚ್ಚಿ ಕುಳಿತು ಕಿಟಕಿಯ ಕಡೆ ನೋಡತೀನಿ, ಮತ್ತೆ ಅದೇ ಹುಳ ಪ್ರತ್ಯಕ್ಷ ಆಗೀ! ಈ ಬಾರಿ ಇದ್ನ ಬಿಡಬಾರದು ಎಂದು ಹೇಳಿ, ಜಿರಳೆ **Hit** ಹೊಡೆದಿದ್ದೇ ತಡ ಅದಕ್ಕೆ ತಲೆತಿರುಗಿದಂಗಾಗಿ ರೆಕ್ಕೆನಾ ಜೋರಾಗಿ ಬಡಿತಾ ಹಾರಿ ಗೋಡೆ ಮೇಲೆ ಕುತ್ಕೊಂಡು ನಂತರ ತುಪ್! ಅಂತ ನೆಲದ ಮೇಲೆ ಬೋರಲು ಬಿದ್ದು,

ತನ್ನ ಉದ್ದವಾದ ಬಾಲಾನ ಬೋರ್ವೆಲ್ ಕೊರಿಬೇಕಾದ್ರೆ ನಿಲ್ಲಿಸ್ತಾರಲ್ಲಾ, ಆ ಬಂಗಿಯಲ್ಲಿ ನೈನ್ಟಿ ಡಿಗ್ರಿ ಮಾಡಿ, ಕಾಲು ಕೈ ವದರಿ ವದರಿ ಸಾಯಬೇಕಾದ್ರೆ ಅದರ ಬಾಲದ ಮುಳ್ಳು ಅಳ್ಳಾಡ್ತಾನೇ ಇತ್ತು.

ಹಾಗೆಯೇ ಸೂಕ್ಷ್ಮವಾಗಿ ಗಮನಿಸಿದರೆ ರಾಜರ ಕಾಲದ ತುತ್ತೂರಿ ಶೇಪಿನ ಎರಡು ಕಪ್ಪು ಬಿಳಿ ಮೀಸೆ. ಆರು ಕಾಲ್ಗಳು. ಮೀಸೆಯಿಂದ ಬಾಲದ ತುದಿವರಿಗೂ ಒಂದು ಇಂಚು ಉದ್ದ ಇದ್ದರೆ, ಅಷ್ಟೇ ಉದ್ದದ ಅದರ ಬಾಲದ ಮುಳ್ಳು! ಮೈಮೇಲೆ ಕಪ್ಪು-ಹಸಿರಾಗಿತ್ತು, ಮಿಲ್ಟ್ರಿಡ್ರೆಸ್ ಬಣ್ಣ. ಎರಡು ಜೊತೆ ರೆಕ್ಕೆ. ನೋಡಲು ಕಡಜಾನ ಹೋಲುತ್ತಿತ್ತು.

ಸರಿ ಆಚೆ ಹೋಗಿ ಸೀಬೆ ಮರದತ್ರ ಕುತ್ಕೊಂಡು ಗಮನಿಸಿದ್ರೇ! ಇಂತದ್ದೇ ಹುಳ ಒಂದು ಬಂದು, ತನ್ನ ಬಾಲದ ಮುಳ್ಳಿಂದ ಸೀಬೆಕಾಯಿಗೆ ಡ್ರಿಲ್ ಕೋರೆದು ತೂರಿಸ್ತಾ ಇದೆ! ಮತ್ತೆ ಒಂದೆರಡು ಕಾಯಿಗಳನ್ನು ಕಿತ್ತು ಪರೀಕ್ಷಿಸಿದರೆ ಅದರ ಮೇಲ್ಭಾಗದಲ್ಲಿ ಸಣ್ಣ ಸಣ್ಣ ತೂತುಗಳು! ಕಟ್ ಮಾಡಿ ನೋಡಿದರೆ ಅದರ ಮೊಟ್ಟೆಗಳು! ಇದನ್ನೇಲ್ಲಾ ನೋಡಿ, ಸೀಬೆ ಹಣ್ಣಿನಲ್ಲಿ ಹುಳ ಹೇಗೆ ಬಂತು? ಅಷ್ಟುಗಟ್ಟಿ ಇರೋ ಸೀಬೆಕಾಯಿನ ಅದು ಈ ಕೂದಲು ಗಾತ್ರದ ಬಳುಕುವ ಮುಳ್ಳಿನಿಂದ ಡ್ರಿಲ್ ಹೇಗೆ ಕೊರಿತದೆ? ಮೊಟ್ಟೆ ಹೇಗೆ ಹಿಡುತ್ತೇ ಒಳಗೆ ? ಎಂದು ವಿಸ್ಮಿತನಾಗಿ ಸತ್ತ ಕೀಟವನ್ನು ಗುಂಡುಪಿನ್ನು ಚುಚ್ಚಿ ಬಿಸಿಲಿನಲ್ಲಿರಿಸುತ್ತಾ ಇರಬೇಕಾದ್ರೆ

'ಏನ್ಸ್ವಾಮಿ ಅದು?' ಎಂದು ಬಂದ ಸಿದ್ದಣ್ಣ.

'ಸಿದ್ದಣಾ ಈ ಉಳಾ ಎಲ್ಲಾನಾ ನೋಡಿದ್ದಿಯಾ?' ಎಂದೆ.

"ಏ! ಕಡಜ ಅಲ್ಲವ್ರ ಅದು. ಏನ್ ಬಾಲ ಅಷ್ಟುದ್ದಾ ಅದೆ?! " ಎನೇಳನಪ್ಪಾ ಈ ಕಾಡಗ ಇರುವೆ ಇಪ್ಪತ್ನಾಲ್ಕು ಕೋಟಿ ಜೀವ್ರಾಶಿಗಳಾಗ ಏನೇನೆಲ್ಲಾ ಅವ್ರೋ! ಆ ಶಿವನೇ ಬಲ್ಲ" ಎಂದು, ತನ್ನ ಎಬ್ಬೆರಳನ್ನು ತೋರಿಸುತ್ತಾ, ಇಷ್ಟಿಷ್ಟ್ ಗಾತ್ರ ಅವೆ ಸೊಳ್ಳೆಗಳು. ಏನ್! ಕಚ್ಚಿಬುಟ್ರೆ ನವೆ! ಅಂಗೆ ಬಂದುಬುಡ್ತಾವೇ ದಂದೆಗಳು!.

ಇದನ್ನೆಲ್ಲಾ "ಸ್ವಾಮಿಗಳಿಗೆ ತಗೊಂಡೋಗಿ ತೊರಿಸ್ರಿ". ನಾನು ಹೇಳ್ತಿನಿ ಸ್ವಾಮಿಗಳಿಗೆ.

"ನನಗೊಂದು ಪ್ಯಾಂಟ್ ಕೊಡ್ಸ್ರಿ ಸಾಮೇ, ಈ ಕಾಡಾಗ ಏಗಕಾಗಲ್ಲಾ, ಇವ್ ಪಡೆ ಕಿತ್ತೋಗ ಸೊಳ್ಳೆಗಳು. ಒಂದೊಂದು ಬೊಗಸೆ ರಕ್ತ ಹೀರಿಬಿಡ್ತವೆ! ದಿನಾನೂ" ಎಂದು ಹೇಳಿ ತನ್ನ ಖಾಕಿ ಚಡ್ಡಿಯನ್ನು ಎರಡು ಬೆರಳಿನಿಂದ ಹಿಡಿದು ತೋರಿಸುತ್ತಾ ಕೈಯಲ್ಲಿ ದೊಣ್ಣೆ ಹಿಡಿದು ಕಾಡಿನ ದಾರಿಯಲ್ಲಿ ಹೊರಟ.



- ಶಂಕರಪ್ಪ ಕೆ.ಪಿ



# ಮನಸ್ಸು

ಮುಗ್ಧ ಮನಸ್ಸುಗಳು
ಮುಕ್ತ ಮಾತುಗಳು
ಯಾವಾಗಲೂ ನಿನ್ನದಾಗಿರಲಿ.

ಹಕ್ಕಿಗಳಾಗಿ, ಹೂವು ಬಳ್ಳಿಗಳಾಗಿ
ಮರದ ರುಚಿರುಚಿ ಹಣ್ಣುಗಳಾಗಿ
ಹಸಿರು ಗಿಡಗಳ ಪಸಿರಾಗಿ
ಯಾವಾಗಲೂ ನೀನಾಗಿರಲಿ.

ಹಿರಿಯರಲ್ಲಿ ಕಿರಿಯರಾಗಿ
ಗುಡಿಗಳಲ್ಲಿ ಭಕ್ತಿಯಾಗಿ
ನಡತೆಯಲ್ಲಿ ನಿಷ್ಟೆಯಾಗಿ
ಮನಗಳಲ್ಲಿ ಮೌನವಾಗಿ
ಮುಗ್ಧ ಮನಸ್ಸುಗಳಾಗಿ.

ನೀನು ನಾನಾಗಿ ನಾನು ನೀನಾಗಿ
ಯಾವಾಗಲೂ ಜತೆ ಜತೆಯಾಗಿ
ಮನುಕುಲದೊಳಗೆ ಮುಗ್ಧರಾಗಿ
ಯಾವಾಗಲೂ ಎಲ್ಲಾವರಾಗಿ
ಮುಗ್ಧ ಮನಸ್ಸುಗಳಾಗಿ.

– ಅಶ್ವಥ್.ಕೆ.ಎನ್

© WCG